ಔಷಧ ಮತ್ತು ಕಾದತಿವರ್ದಕ ಅಧಿಕಾರಿ ಮತ್ತು ನಿಯಂತ್ರಣಾಧಿಕಾರಿಗಳ ವಿದ್ಯಾರ್ಹತೆ

೫೨೨(೧೨೮೦) ಶ್ರೀ ಎಲ್. ಆರ್. ಶಿವರಾಮೆ ಗೌಡ (ನಾಗಮಂಗಲ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಭಾರತ ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಜಿ. ಎಸ್. ಆರ್. ೪೪೩(ಇ) ದಿನಾಂಕ ೧೨-೪-೮೪ ರಲ್ಲಿ ಔಷಧ ಮತ್ತು ಕಾದತಿವರ್ದಕ ನಿಯಮಗಳು ೧೯೪೫ರ ನಿಯಮಗಳಿಗೆ ತಿದ್ದುಪಡಿ ಹೊರಡಿಸಿ, ಪರವಾನಗಿ ಅಧಿಕಾರಿ ಮತ್ತು ನಿಯಂತ್ರಣಾಧಿಕಾರಿಗಳಿಗೆ ವಿದ್ಯಾರ್ಹತೆ ಮತ್ತು ಅನುಭವವನ್ನು ಪರಿಷ್ಕರಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಪ್ರಸ್ತುತ ಪರವಾನಗಿ ಅಧಿಕಾರಿ ಮತ್ತು ನಿಯಂತ್ರಣಾಧಿಕಾರಿಯಾಗಿರುವ ಔಷಧ ನಿಯಂತ್ರಕರು ಸದರಿ ಅಧಿಸೂಚನೆ ಯಲ್ಲಿನ ಅನುಭವವನ್ನು ಹೊಂದಿರುತ್ತಾರೆಯೇ ?

ಇ) ಪ್ರಶ್ನೆ (ಆ) ಗೆ ಉತ್ತರವು ತದ್ವಿರುದ್ಧವಾದಲ್ಲಿ ಪರವಾನಗಿ ಅಧಿಕಾರಿಯಾಗಿ ನಿಯಂತ್ರಣಾಧಿಕಾರಿಯಾಗಿ ಅವರು ನವೀಕರಿಸಿದ ಪರವಾನಗಿಗಳು ಮತ್ತು ಆದೇಶಗಳು, ಸುತ್ತೋಲೆ, ಸೂಚನೆಗಳು ಕಾನೂನು ಬಾಹಿರವಲ್ಲವೇ ?

ಈ) ಮೇಲ್ಕಂಡ ತಿದ್ದುಪಡಿಯನಿಯಮಗಳನ್ವಯ ಇತರೆ ರಾಜ್ಯಗಳಾದ ಮಹಾರಾಷ್ಟ್ರ, ಬಿಹಾರ್‌ಇತ್ಯಾದಿ ರಾಜ್ಯಗಳು ತಮ್ಮ ಪರವಾನಗಿ ಅಧಿಕಾರಿ ಮತ್ತು ನಿಯಂತ್ರಣಾಧಿಕಾರಿಗಳನ್ನು ಬದಲಾಯಿಸಿರುವುದು ನಿಜವೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಹೌದು.

ಆ) ಹೊಂದಿದ್ದಾರೆ.

ಇ) ಉದ್ಭವಿಸುವುದಿಲ್ಲ.

ಈ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಉತ್ತರದಲ್ಲಿ ಭಾರತ ಸರ್ಕಾರ ೧೨-೪-೧೯೮೪ ರಂದು ಒಂದು ಕಾನೂನನ್ನು ತಿದ್ದುಪಡಿಮಾಡಿ ಈ ರಾಜ್ಯದಲ್ಲಿರತಕ್ಕಂಥ ಔಷಧ ನಿಯಂತ್ರಣಾಧಿಕಾರಿಗಳಿಗೆ ಅನುಭವ ಮತ್ತು ಅರ್ಹತೆಗಳು ಇರಬೇಕು, ಇದರ ಬಗ್ಗೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಒಂದು ಕಾನೂನನ್ನು ಮಾಡಿದ್ದಾರೆ. ಈ ಕಾನೂನು ಬಂದಮೇಲೆ ನಮ್ಮ ರಾಜ್ಯದಲ್ಲಿರತಕ್ಕಂಥ ಔಷಧ ನಿಯಂತ್ರಣ ಅಧಿಕಾರಿಗಳಿಗೆ ಆ ಒಂದು ಅನುಭವ ಇದೆಯೇ, ಅನುಭವ ಇರಬಹುದು, ಬಹಳ ದಿವಸ ಇಲಾಖೆಯಲ್ಲಿ ಕೆಲಸ ಮಾಡಿರಬಹುದು, ಆದರೆ ಕೇಂದ್ರ ಸರ್ಕಾರದವರು ಏನು ಅರ್ಹತೆಗಳನ್ನು ಕೇಳಿದ್ದಾರೆ. ಆ ಅರ್ಹತೆಗಳಿಗೆ ಒಳಪಟ್ಟಿದ್ದಾರೆಯೇ ಎಂಬುದನ್ನು ತಿಳಿಸಬೇಕು.

ಶ್ರೀಮತಿ ಮನೋರಮ ಮಧ್ವರಾಜ್.—ಅಧ್ಯಕ್ಷರೆ, ಈಗ ಪ್ರಸ್ತುತ ರಾಜ್ಯದ ಔಷಧ ನಿಯಂತ್ರಕರು ಕೇಂದ್ರ ಸರ್ಕಾರದವರು ಕೇಳಿರುವಂಥ ಅರ್ಹತೆಗೆ ಸಂಪೂರ್ಣವಾಗಿ ಒಳಗಾಗಿದ್ದಾರೆ. ಆ ಯೋಗ್ಯತೆ ಅವರಿಗೆ ಉಂಟು. ಅಷ್ಟು ಕ್ವಾಲಿಫಿಕೇಷನ್ಸ್ ಅವರಿಗೆ ಇದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನನಗೆ ತಿಳಿದ ವಿಚಾರದ ಪ್ರಕಾರ ಅನುಭವ ಇದೆ. ಆದರೆ ಕೇಂದ್ರ ಸರ್ಕಾರ ಏನು ನಿಯಮಗಳನ್ನು ಹಾಕಿದೆ, ಆ ನಿಯಮಗಳ ಪ್ರಕಾರ ಅನುಭವ ಇಲ್ಲ ಎನ್ನುತಕ್ಕ ವಿಚಾರ ನಿಮ್ಮ ಗಮನದಲ್ಲಿಯೇ ?

ಶ್ರೀಮತಿ ಮನೋರಮ ಮಧ್ವರಾಜ್. ಪೂರ್ಣ ಗಮನದಲ್ಲಿದ್ದೇ ಮಾತನಾಡುತ್ತಿದ್ದೇನೆ. ಅವರಿಗೆ ಆ ಅರ್ಹತೆ ಇದೆ. ಅದನ್ನು ಚಾಲೆಂಜ್ ಮಾಡಿ ಒಬ್ಬರು ಕೋರ್ಟಿಗೆ ಹೋಗಿದ್ದರು, ಅಲ್ಲಿಯೂ ಕೂಡ ಅವರು ಗೆದ್ದಿದ್ದಾರೆ, ಕೋರ್ಟಿನಲ್ಲಿಯೂ ಕೂಡ ಅವರಿಗೆ ಜಯ ಆಗಿದೆ.